# "ರಾಷ್ಟ್ರೀಯ ವಿಜ್ಞಾನ ದಿನಾಚರಣೆ–2024"

ದಿನಾಂಕ: 28.02.2024 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆ, ಬಾಗಲಕೋಟೆ** ಇವರ ಸಂಯುಕ್ತ ಆಶ್ರಯದಲ್ಲಿ **"ರಾಷ್ಟ್ರೀಯ ವಿಜ್ಞಾನ ದಿನಾಚರಣೆ–2024"** ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆಯ ಬಾಗಲಕೋಟೆಯ **ಒಟ್ಟು** 65 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಚಿದಾನಂದ ಪಿ. ಮನ್ನೂರ,** ವಕೀಲರು, ವಿಶ್ರಾಂತ ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ.ಬಾಗಲಕೋಟೆ, ವಿಶ್ರಾಂತ ಡೀನ್, ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ, ಕೃ.ವಿ.ವಿ.ಧಾರವಾಡ ಹಾಗೂ ಮಾಜಿ ಸದಸ್ಯರು, ವ್ಯವಸ್ಥಾಪಕ ಮಂಡಳಿ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಮತ್ತು ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಪ್ರತಿಜ್ಞಾ ವಿಧಿಯನ್ನು ಕೈಗೊಳ್ಳಲಾಯಿತು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಚಿದಾನಂದ ಪಿ. ಮನ್ನೂರ** ರವರು, ವಿದ್ಯಾರ್ಥಿಗಳಿಗೆ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಯನ್ನು ಆಚರಿಸಲು ಮುಖ್ಯ ಕಾರಣರಾದ **ಸರ್ ಸಿ.ವಿ.ರಾಮನ್** ರ ಬಗ್ಗೆ ಹಾಗೂ ಅವರ ಸಂಶೋಧನೆಗಳ ಮಹತ್ವದ ಬಗ್ಗೆ ವಿವರವಾಗಿ ತಿಳಿಸಿದರು, ಮುಂದುವರೆದು, ವಿಜ್ಞಾನಕ್ಕೆ ಅತ್ಯುನ್ನತ ಕೊಡುಗೆಗಳನ್ನು ನೀಡಿರುವ ಕೆಲ ವಿಜ್ಞಾನಿಗಳ ಬಗ್ಗೆಯೂ ವಿವರಿಸುತ್ತ ವಿಜ್ಞಾನದ ಮೇಲೆ ಹೆಚ್ಚಿನ ಆಸಕ್ತಿಯನ್ನು ವಹಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅದರಂತೆ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀ ಸಚಿನ ಬತ್ರಾ,** ಪ್ರಾಂಶುಪಾಲರು, ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆ, ಬಾಗಲಕೋಟೆ ರವರು ಮಾತನಾಡಿ, ವಿದ್ಯಾರ್ಥಿಗಳು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಮಹತ್ವವನ್ನು ಅರಿತುಕೊಂಡು ವೈಜ್ಞಾನಿಕ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕೆಂದು ಕರೆನೀಡಿದರು ಹಾಗೂ ಸದರಿ ಕಾರ್ಯಕ್ರಮಕ್ಕೆ ತಮ್ಮ ಶಾಲೆ ಆಯ್ಕೆಮಾಡಿಕೊಂಡಿದ್ದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಅದರಂತೆ, ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದಂತಹ **ಡಾ.ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು ತೋ.ವಿ.ವಿ. ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ವಿದ್ಯಾರ್ಥಿಗಳು ವಿಜ್ಞಾನದ ಮೇಲೆ ತಮ್ಮ ಒಲವನ್ನು ಹೆಚ್ಚಿಸುತ್ತ, ಅವೈಜ್ಞಾನಿಕ ಮೌಢ್ಯ ಆಚರಣೆಗಳಿಂದ ದೂರವಿರುವಂತೆ ತಿಳಿಸಿದರು ಹಾಗೂ ಈ ಹಿಂದೆ ಶರಣರು ತಮ್ಮ ವಚನ ಸಾಹಿತ್ಯದ ಮೂಲಕ ವೈಜ್ಞಾನಿಕ ನಂಬಿಕೆಗಳನ್ನು ಬೆಳೆಸಿರುವ ಬಗ್ಗೆ ವಿಸ್ತೃತವಾಗಿ ತಿಳಿಸಿದರು.

ಮುಂದುವರೆದು, ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾಗಿದ್ದ **ಪ್ರಬಂಧ ಸ್ಪರ್ಧೆಯಲ್ಲಿ** ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು ಹಾಗೂ ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆಯ ಕೆಲ ವಿದ್ಯಾರ್ಥಿಗಳು ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಿ ವಿವರಿಸಿದರು.

ಅದರಂತೆ, ಸದರಿ ಕಾರ್ಯಕ್ರಮವನ್ನು **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿ ಹಾಗೂ **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಂದಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ, **ಶ್ರೀಮತಿ ರಿಚಾ ಬತ್ರಾ,** ಸಹ ಶಿಕ್ಷಕರು, **ಜ್ಯೋತಿ ಪಿ,** ಸಹ ಶಿಕ್ಷಕರು, **ಶ್ರೀ ರಾಘವೇಂದ್ರ ಸುಗಂಧಿ,** ಸಹ ಶಿಕ್ಷಕರು, **ಭಾಗ್ಯಾಶ್ರೀ ಜಿ,** ಸಹ ಶಿಕ್ಷಕರು, **ಐಶ್ವರ್ಯ ಆರ್**.ಸಿ. ಸಹ ಶಿಕ್ಷಕರು, ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆ, ಬಾಗಲಕೋಟೆ, **ಶ್ರೀ ಗಂಗನಗೌಡ ಪಾಟೀಲ,** ದ್ವಿ.ದ.ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ
ಬಾಗಲಕೋಟೆ
ತೇಜಸ್ ಅಂತರಾಷ್ಟ್ರೀಯ ಪ್ರೌಢಶಾಲೆ, ಬಾಗಲಕೋಟೆ
“ರಾಷ್ಟ್ರೀಯ ವಿಜ್ಞಾನ ದಿನಾಚರಣೆ–2024”


























ವಿಜ್ಞಾನ ಕೇಂದ್ರ ಬಾಗಲಕೋಟೆ

*************